**C.C.No. 1266/2025**
**PW:01**

**ಸಾಕ್ಷಿಯನ್ನು ದಿಃ *20/11/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಎಸಎಸಪಿ ವಕೀಲರಿಂದ ಆರೋಪಿ ಪರವಾಗಿ.**

ನಾನು ಐಟಿಐ ಮಾಡಿರುತ್ತೇನೆ. ನಾನು ಹೋಂ ಗಾರ್ಡ ಮತ್ತು ಟಾಟಾ ಎಸಿಎ ವಾಹನ ಚಾಲನೆ ಮಾಡುವ ಕೆಲಸವನ್ನು ಮಾಡುತ್ತೇನೆ. ನಾನು ಹೋಂ ಗಾರ್ಡ ಎಂದು ಧಾರವಾಡದಲ್ಲಿ 4-5 ವರ್ಷಗಳಿಂದ ದಿನಗೂಲಿಯಂತೆ ಕೆಲಸ ಮಾಡುತ್ತೇನೆ. ಈ ರೀತಿ ನನಗೆ ಸದರಿ ಕೆಲಸದಿಂದ ಅಂದಾಜು ತಿಂಗಳಿಗೆ 22 ಸಾವಿರ ರೂಪಾಯಿಗಳ ಆದಾಯ ಬರುತ್ತದೆ. ಎರಡು ಗೂಡ್ಸ ವಾಹನಗಳು ನನ್ನ ಅಣ್ಣ ನಬೀಸಾಬ ಇವರ ಹೆಸರಿನಲ್ಲಿರುತ್ತವೆ. ಸದರಿ ವಾಹನಗಳ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ, ನೋಡಿ ಹೇಳಬಹುದು. ನಮಗೆ ಪುಡಕಲಕಟ್ಟಿ ಗ್ರಾಮದಲ್ಲಿ 3 ಎಕರೆ ಜಮೀನು ಇರುತ್ತದೆ, ಇದು ಅಲ್ಲದೆ ಬೇರೆಯವರು ಜಮೀನುಗಳನ್ನು ಸಹ ಲಾವಣಿ ಮೇಲೆ ಶೇತ್ಕಿ ಮಾಡುತ್ತೇವೆ. ಸದರಿ ಜಮೀನಿನ ಆರ್.ಎಸ್.ನಂ. 201/ಎ ಇರಬಹುದು, ಸದರಿ ಆಸ್ತಿ ನನ್ನ ತಂದೆ ಮತ್ತು ದೊಡ್ಡಪ್ಪನ ಹೆಸರಿನಲ್ಲಿ ಜಂಟಿಯಾಗಿರುತ್ತದೆ.

ಆರೋಪಿತರು ನನಗೆ 4-5 ವರ್ಷಗಳಿಂದ ಪರಿಚಯವಿರುತ್ತಾರೆ. ಆರೋಪಿತರು ಉಪ್ಪಿನಬೇಟಗೇರಿಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದು, ಅಲ್ಲಿ ನಮ್ಮ ಮೊಬೈಲ ಅಂಗಡಿ ಬರುತ್ತಿರುವ ಕಾರಣ ಅವರ ಪರಿಚಯ ಬೆಳೆಯಿತು. ಸದರಿ ಅಂಗಡಿ ನಾನೇ ಬಾಡಿಗೆಗೆ ಪಡೆದು ಅಂಗಡಿ ನಡೆಸುತ್ತಿದ್ದೆ. ಸದರಿ ಅಂಗಡಿ ತೋಟದ ಎನ್ನುವ ವೈದ್ಯರಿಗೆ ಸಂಬಂಧಿಸಿದ್ದು ಇರುತ್ತದೆ. ಸದರಿ ಅಂಗಡಿಯ ಬಾಡಿಗೆ ಕರಾರುಪತ್ರ ಇರುವುದಿಲ್ಲ. ಆರೋಪಿತರು ಪ್ರಸ್ತುತ ಹಳಿಯಾಳ ರಸ್ತೆಯಲ್ಲಿರುವ ಊರಿನಲ್ಲಿ ಶಿಕ್ಷಕರು ಎಂದು ಕೆಲಸ ಮಾಡುತ್ತಿದ್ದಾರೆ, ಸದರಿ ಊರಿನ ಹೆಸರು ನೆನಪು ಬರುತ್ತಿಲ್ಲ. ಸದರಿ ಮೊಬೈಲ ಅಂಗಡಿ 2011 ರಿಂದ ನಡೆಸುತ್ತಿದ್ದೆ, ಕೋರೊನಾ ಬಂದ ನಂತರ ಅಂಗಡಿ ಮುಚ್ಚಿರುತ್ತೇನೆ. ಆರೋಪಿತರು ನನಗೆ ಪರಿಚಯಸ್ಥರೇ ಅಲ್ಲ ಮತ್ತು ನಾನು ಯಾರು ಎಂದು ಅವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಶಿವಾನಂದ ಬೇಟಗೇರಿ ಎನ್ನುವ ಪೊಲೀಸ ಪೇದೆ ಪರಿಚಯ ನನಗೆ ಇಲ್ಲ. ಸದರಿಯವರು ಮೊದಲು ಧಾರವಾಡದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಅಳ್ನಾವರದಲ್ಲಿ ಸದರಿಯವರು ಮುಖ್ಯಪೇದೆ ಎಂದು ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಸಹ ಪೊಲೀಸ ಇಲಾಖೆಯಲ್ಲಿದ್ದು, ನಾನು ಸದರಿ ಇಲಾಖೆಯಲ್ಲಿ ಹೋಂಗಾರ್ಡ ಎಂದು ಕೆಲಸ ಮಾಡುತ್ತಿರುವ ಕಾರಣ

ಅವರ ಪರಿಚಯವಿದೆ ಎಂದರೆ ಸರಿಯಲ್ಲ. ಸದರಿಯವರು ನನಗೆ ತುಂಬಾ ಆತ್ಮೀಯರು ಎಂದರೆ ಸರಿಯಲ್ಲ.

ಆರೋಪಿತರು ನನಗೆ ದಿಃ15-04-2024 ರಂದು ಸಾಲವನ್ನು ಕೇಳಿದ್ದರು, ನಾನು ನನ್ನ ಹತ್ತಿರ ಇರುವುದಿಲ್ಲ ಎಂದು ಹೇಳಿರುತ್ತೇನೆ. ನನ್ನ ಹತ್ತಿರ ಆ ಸಮಯದಲ್ಲಿ 4 ಲಕ್ಷ ರೂಪಾಯಿಗಳು ಇರಲಿಲ್ಲ. ಈ ರೀತಿ ಸಾಲವನ್ನು ಪೋನ ಮುಖಾಂತರ ಕೇಳಿರುತ್ತಾರೆ. ಸದರಿಯವರ ಪೋನ ನಂಬರ ನನ್ನ ಮೊಬೈಲನಲ್ಲಿ ಇರುತ್ತದೆ, ಬಾಯಿ ಮಾತಿನಿಂದ ನನಗೆ ಹೇಳಲು ಬರುವುದಿಲ್ಲ. ದಿಃ20-04-2024 ರಂದು ನಾನು ಆರೋಪಿತರಿಗೆ 4 ಲಕ್ಷ ರೂಪಾಯಿಗಳ ನಗದನ್ನು ಧಾರವಾಡದ ಉಪವನ ಹೋಟೇಲನಲ್ಲಿ ಕೊಟ್ಟಿರುತ್ತೇನೆ. ಕೆಲವು ನೋಟುಗಳು 2 ಸಾವಿರ ರೂಪಾಯಿ ಮುಖಬೆಲೆ ಮತ್ತು ಕೆಲವೊಂದು 500 ರೂಪಾಯಿಗಳ ಮುಖಬೆಲೆ ನೋಟುಗಳು ಇದ್ದವು. ಆ ಸಮಯದಲ್ಲಿ ಬೇರೆ ಯಾರು ಪ್ರಸ್ತುತವಿರಲಿಲ್ಲ.

ನಾನು ವ್ಯಾಪರಸ್ಥನಿರುವ ಕಾರಣ 20 ಸಾವಿರ ರೂಪಾಯಿಗಳ ಮೇಲ್ಪಟ್ಟ ಹಣದ ವ್ಯವಹಾರವನ್ನು ಬ್ಯಾಂಕ ಮುಖಾಂತರ ಮಾಡಬಹುದಾಗಿದೆ ಎಂದರೆ ನಿಜ. ಸಾಮಾನ್ಯವಾಗಿ ಹಣದ ವ್ಯವಹಾರಕ್ಕೆ ಲಿಖಿತವಾಗಿ ದಾಖಲೆ ಬರೆದುಕೊಳ್ಳುತ್ತಾರೆ ಎಂದರೆ ನಿಜ. ನನಗೆ ಬಿಪಿಎಲ್ ಪಡಿತರ ಚೀಟಿ ಇರುತ್ತದೆ. ನನಗೆ ಆರೋಪಿತರಿಗೆ 4 ಲಕ್ಷ ರೂಪಾಯಿ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯವಿಲ್ಲ ಎಂದರೆ ಸರಿಯಲ್ಲ. ಸದರಿ 4 ಲಕ್ಷ ರೂಪಾಯಿಗಳನ್ನು ಬಹಳ ದಿವಸಗಳಿಂದ ಕೂಡಿ ಇಟ್ಟಿದ್ದೆ ಮತ್ತು ಅದರಲ್ಲಿ ನಾನು ಚಾಲಕನಾಗಿ ಕೆಲಸ ಮಾಡಿರುವ ಹಣ ಮತ್ತು ಜಮೀನಿನಲ್ಲಿ ಕಡ್ಲಿ ಮಾರಿರುವ ಹಣ ಸಹ ಇತ್ತು. ಸದರಿ ಮೊತ್ತವನ್ನು ನಾನು ಮನೆಯಲ್ಲಿ ಕೂಡಿ ಇಟ್ಟಿದ್ದೆ. ನಮ್ಮ ಮನೆಯಲ್ಲಿ ನಾವು ಒಟ್ಟು ಕುಟುಂಬದ ಸದಸ್ಯರು 25 ಜನ ಇರುತ್ತೇವೆ. ನಮ್ಮ ಮನೆತನಕ್ಕೆ ಒಟ್ಟು 15 ಎಕರೆ ಜಮೀನು ಇರುತ್ತದೆ. ಜಮೀನಿನ ಉತಾರಗಳನ್ನು ನಾನು ಹಾಜರುಪಡಿಸಬಹುದು. ನನ್ನ ದೊಡ್ಡಪ್ಪ ತೀರಿಹೋದ ನಂತರ ಸದರಿ ಕುಟುಂಬದ ವ್ಯವಹಾರವನ್ನು ನನ್ನ ತಂದೆ ಮತ್ತು ಚಿಕ್ಕಪ್ಪ ಮಾಡುತ್ತಾರೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ.

ಆರೋಪಿತರು ಮೂಲತಃ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಆರೋಪಿತರಿಗೆ ಇಬ್ಬರೂ ಗಂಡು ಮಕ್ಕಳು ಇರುತ್ತಾರೆ ಎಂದು ಹೇಳಿರುತ್ತಾರೆ. ಅವರ ಕುಟುಂಬದ ವಿವರಗಳು ನನಗೆ

ಗೊತ್ತಿಲ್ಲ. ನನ್ನ ಅವರ ಪರಿಚಯವಾಗಿ 5-6 ವರ್ಷದ ನಂತರ ಈ ವ್ಯವಹಾರ ಮಾಡಿರುತ್ತೇವೆ. ಆರೋಪಿತರು ನನ್ನ ಹತ್ತಿರ ಯಾವತ್ತು 4 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಸರಕಾರಿ ಶಿಕ್ಷಕ ಇರುವ ಕಾರಣ ತಿಂಗಳಿಗೆ 95 ಸಾವಿರ ರೂಪಾಯಿ ವೇತನ ಬರುತ್ತದೆ ಎಂದರೆ ಇರಬಹುದು. ಆರೋಪಿತರಿಗೆ ಸ್ಥಿರಾಸ್ತಿಗಳು ಸಹ ಇವೆ ಎಂದರೆ ಇರಬಹುದು. ಸದರಿಯವರು ಆರ್ಥಿಕವಾಗಿ ಸದೃಢರು ಇರುತ್ತಾರೆ ಎಂದರೆ ಇರಬಹುದು.

ಆರೋಪಿತರು ಮತ್ತು ಶಿವಾನಂದ ಬೇಟಗೇರಿ ಇಬ್ಬರೂ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಹೊಸದಾಗಿ 2023 ನೇ ಇಸ್ವಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ನಿಜ. ಸದರಿ ಮನೆಯ ಸಂಬಂಧ ಆರೋಪಿತರು ಅವರ ಸ್ನೇಹಿತರಾದ ಶಿವಾನಂದ ಇವರ ಹತ್ತಿರ 2 ಲಕ್ಷ ರೂಪಾಯಿಗಳ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲದ ಸಂಬಂಧ ಅವರಿಗೆ 2 ಚೆಕ್ಕುಗಳನ್ನು ಭದ್ರತೆಗಾಗಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಸದರಿಯವರಿಗೆ ಕೊಡುವ ಬಾಕಿ ಮೊತ್ತ ಮತ್ತು ಅದರ ಬಡ್ಡಿ ಫೋನಪೇ ಮತ್ತು ನಗದು ರೂಪದಲ್ಲಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಹೆಚ್ಚಿನ ಬಡ್ಡಿ ಮತ್ತು ಹೆಚ್ಚಿನ ಮೊತ್ತ ಪಡೆಯುವ ಸಲುವಾಗಿ ಭದ್ರತೆಗಾಗಿ ನೀಡಿರುವ ಎರಡು ಚೆಕ್ಕುಗಳಲ್ಲಿ ಒಂದು ಚೆಕ್ಕನ್ನು ನನ್ನ ಮುಖಾಂತರ ದುರುಪಯೋಗ ಮಾಡಿಕೊಂಡು ಈ ರೀತಿ ಸುಳ್ಳು ಪ್ರಕರಣ ಹೂಡಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತರು ನನಗೆ 28 ನೇ ತಾರೀಖು ಸದರಿ ನಿ.ಪಿ.1 ರಂತೆ ಇರುವ ಚೆಕ್ಕನ್ನು ಕೊಟ್ಟಿರುತ್ತಾರೆ. ಚೆಕ್ಕಿನ ಎಲ್ಲಾ ವಿವರಗಳನ್ನು ನಾನೇ ಬರೆದುಕೊಂಡಿರುತ್ತೇನೆ. ನನ್ನ ಫಿರ್ಯಾದಿಯಲ್ಲಿ ಮತ್ತು ಪ್ರಮಣಪತ್ರದಲ್ಲಿ ಈ ರೀತಿ ಆರೋಪಿತರು ಖಾಲಿ ಸಹಿ ಮಾಡಿದ ಚೆಕ್ಕನ್ನು ಕೊಟ್ಟಿರುತ್ತಾರೆ, ಅದರ ವಿವರಗಳನ್ನು ನಾನೇ ನಮೂದಿಸಿದ್ದೇನೆ ಎಂದು ಬರೆದಿಲ್ಲ ಎಂದರೆ ನಿಜ. ಈ ರೀತಿ ಫಿರ್ಯಾದಿಯಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಆರೋಪಿತರೇ 4 ಲಕ್ಷ ರೂಪಾಯಿಗಳೆಂದು ಬರೆದು ಸಹಿ ಮಾಡಿಕೊಟ್ಟಿರುತ್ತಾರೆ ಎಂದು ಬರೆಸಿದ್ದೇನೆ ಎಂದರೆ ನಿಜ. ಚೆಕ್ಕಿನ ಮೇಲಿರುವ ಸಹಿ ನೀಲಿ ಮಸಿಯಿಂದ ಇದ್ದು, ವಿವರಗಳು ಎಲ್ಲವೂ ಕಪ್ಪು ಮಸಿಯಲ್ಲಿವೆ ಎಂದರೆ ನಿಜ. ಸದರಿ ಚೆಕ್ಕು ಭದ್ರತೆಗಾಗಿ ಶಿವಾನಂದ ಇವರಿಗೆ ನೀಡಿರುವ ಚೆಕ್ಕು ಎಂದರೆ ಸರಿಯಲ್ಲ.

ಆರೋಪಿತರು ನನಗೆ ಪರಿಚಯವಿರುವುದಿಲ್ಲ, ನಾನು ಆರೋಪಿಗೆ 4 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ, ಶಿವಾನಂದ ಇವರ ಜೊತೆಗೆ ಮಿಲಾಪಿಯಾಗಿ ಅವರಿಗೆ ಕೊಟ್ಟಿರುವ ಚೆಕ್ಕನ್ನು ದುರುಪಯೋಗ ಮಾಡಿಕೊಂಡು ಈ ರೀತಿ ಸುಳ್ಳು ಪ್ರಕರಣ ಹೂಡಿ ಅದರಂತೆ ಸುಳ್ಳು ಸಾಕ್ಷವನ್ನು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.